# ಸಭಾಪತಿಗಳ ನೋಟಿಸ್‌ಗೆ ಕಾರ್ಯದರ್ಶಿಯ ಉತ್ತರ

ಸಂ.ಕ.ಸಮಾಚಾರ ಬೆಂಗಳೂರು

ವಿಧಾನ ಪರಿಷತ್‌ನಲ್ಲಿ ಇತ್ತೀಚೆಗೆ ಒಂದು ದಿನದ ಮಟ್ಟಿಗೆ ನಡೆದ ಅಧಿವೇಶನ ವೇಳೆ ಸಂಭವಿಸಿದ ಗದ್ದಲದಲ್ಲಿ ಯಾವುದೇ ಪ್ರಮಾದ ನಡೆಯದಂತೆ ಕ್ರಮವಹಿಸಲಾಗಿತ್ತು ಎಂದು ಪರಿಷತ್‌ನ ಕಾರ್ಯದರ್ಶಿಗಳು ಸಭಾಪತಿ ಕೆ.ಪ್ರತಾಪ್‌ಚಂದ್ರಶೆಟ್ಟಿ ಅವರಿಗೆ ಸಮಜಾಯಿಷಿ ನೀಡಿದ್ದಾರೆಂದು ಗೊತ್ತಾಗಿದೆ.

ಗದ್ದಲದ ಹಿನ್ನೆಲೆಯಲ್ಲಿ ವಿಧಾನಪರಿಷತ್‌ನ ಸಭಾಪತಿ ಪ್ರತಾಪ್ ಚಂದ್ರಶೆಟ್ಟಿ ಅವರು ಪರಿಷತ್‌ನ ಕಾರ್ಯದರ್ಶಿ ಮಹಾಲಕ್ಷ್ಮೀ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಿದ್ದರು. ಈ ನೋಟಿಸ್‌ಗೆ ಉತ್ತರಿಸಿರುವ ಅವರು, ಸದನದಲ್ಲಿ ಯಾವುದೇ ರೀತಿಯ ಪ್ರಮಾದ ನಡೆಯದಂತೆ ಹಾಗೂ ಸಭಾಪತಿ ಹಾಗೂ ಸದನದ ಸದಸ್ಯರ ಘನತೆಗೂ ಧಕ್ಕೆ ಬಾರದಂತೆ ನಡೆದುಕೊಂಡಿದ್ದೇನೆ. ತಮ್ಮಿಂದ ಯಾವುದೇ ಲೋಪವಾಗಿಲ್ಲ. ಗದ್ದಲದ ವೇಳೆ ಸಚಿವರು, ಹಿರಿಯ ಸದಸ್ಯರು ಸಹ ಸದನದಲ್ಲಿ ಹಾಜರಿದ್ದರು ಎಂದು ಸಭಾಪತಿಗಳಿಗೆ ನೀಡಿರುವ ಉತ್ತರದಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.